ಲಿಖಿತ ಮೂಲಕ ಉತ್ತರಿಸುವ

ಕರ್ನಾಟಕ ವಿಧಾನ ಪರಿಷತ್ತು
ನೂರ ನಲವತ್ತನೆಯ ಅಧಿವೇಶನ
ಗುರುವಾರ, ದಿನಾಂಕ : 12 ನೇ ಮಾರ್ಚ್, 2020

ಎನ್.ಎ. ಮುತ್ತಣ್ಣ ಪೊಲೀಸ್ ಶಾಲೆ, ಧಾರವಾಡ ಇದರ ಬಗ್ಗೆ

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ) :-

695 (989) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಎನ್.ಎ. ಮುತ್ತಣ್ಣ ಸ್ಮಾರಕ ಪೊಲೀಸ್ ಮಕ್ಕಳ ವಸತಿ ಶಾಲೆ ಸ್ಥಾಪನೆ ಯಾವ ದಿನಾಂಕದಿಂದ ಪ್ರಾರಂಭವಾಗಿದೆ; ಈ ಶಾಲೆಯನ್ನು ಸ್ಥಾಪಿಸಲು ಇರುವ ಮುಖ್ಯ ಉದ್ದೇಶವೇನು;

(ಆ) ಈ ಶಾಲೆಯಲ್ಲಿ ಕಳೆದ 10 ವರ್ಷಗಳಿಂದ ಇರುವ ಮಕ್ಕಳ ಸಂಖ್ಯೆ ಎಷ್ಟು; ಕಳೆದ 10 ವರ್ಷಗಳಿಂದ ಶಾಲೆ ಎಸ್.ಎಸ್.ಎಲ್.ಸಿ ಫಲಿತಾಂಶವೆಷ್ಟು;

(ಇ) ರಾಜ್ಯ ಮಟ್ಟದಲ್ಲಿ ಮತ್ತು ರಾಷ್ಟ್ರ ಮಟ್ಟದಲ್ಲಿ ಶಾಲೆಯ ವಿದ್ಯಾರ್ಥಿಗಳ ಸಾಧನೆ ಏನು; (ಸವಿಸ್ತಾರವಾದ ಮಾಹಿತಿ ನೀಡುವುದು)

(ಈ) 2019ರಲ್ಲಿ ಶಾಲೆಯಲ್ಲಿನ 160 ಮಕ್ಕಳನ್ನು ಅಂದಿನ ಪೊಲೀಸ್ ಅಧಿಕಾರಿಗಳು ಶಾಲೆಯಿಂದ ಹೊರಹಾಕಿದ್ದು ಏಕೆ; ಮತ್ತು ಕಾರಣವೇನು;

(ಉ) ಬಡ ಪೊಲೀಸ್‌ರ ಮಕ್ಕಳಿಗೆ ಅನುಕೂಲವಾಗಿರುವ ಶಾಲೆಯನ್ನು ಕಾನೂನು ಬಾಹಿರವಾಗಿ ಮುಚ್ಚಲು ಪ್ರಯತ್ನಿಸಿದಂತಹ ಅಂದಿನ ಪೊಲೀಸ್ ಅಧಿಕಾರಿಗಳ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮವೇನು;

(ಊ) ಶಾಲೆಯಲ್ಲಿ ಈ ಮೊದಲು ಅವ್ಯಾಹತವಾಗಿ ನಡೆಯುತ್ತಿದ್ದ ಮಕ್ಕಳ ರೇಷನ್, ಸಮವಸ್ತ್ರ, ಶೂ ಇತ್ಯಾದಿಗಳಲ್ಲಿ ಆಗುತ್ತಿದ್ದ ಭ್ರಷ್ಟಾಚಾರಗಳು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಅವರ ಮೇಲೆ ತೆಗೆದುಕೊಂಡ ಕ್ರಮಗಳೇನು;

(ಋ) ಈ ಶಾಲೆಯನ್ನು ಮೊದಲಿನಂತೆ ಸರ್ಕಾರ ನಡೆಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದೇ ?